ದಕ್ಷಿಣ ಕನ್ನಡ ಹೆಂಚಿನ ಕಾರ್ಖಾನೆ ಮತ್ತು ಕಾರ್ಮಿಕರ ವೇತನದ ಬಗ್ಗೆ

೩೦೫೩. ಶ್ರೀ ಬಿ. ಎಂ. ಇದಿನಬ್ಬ, (ಉಳ್ಳಾಲ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹೆಂಚಿನ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಆ) ಇಲ್ಲಿರುವ ಹಂಚಿನ ಕಾರ್ಖಾನೆಗಳ ಸ್ಥಿತಿ ಪ್ರಗತಿದಾಯಕವಾಗಿದೆಯೇ ? ಯಾವುದೇ ಕಾರ್ಖಾನೆಗಳಿಂದ ತಮ್ಮ ಕಷ್ಟಗಳ ಬಗ್ಗೆ ದೂರಿನ ಮನವಿ ಬಂದಿದೆಯೇ ? ಹಾಗಿದ್ದಲ್ಲಿ, ಆ ಕುರಿತು ಸರಕಾರ ಕೈಗೊಂಡ ಕ್ರಮಗಳೇನು ?

ಇ) ಹೆಚ್ಚು ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಲಾಗಿದೆಯಲ್ಲವೇ ? ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೊಳಿಸಲಾಗಿದೆ. ಆ ವೇತನದ ದರದ ವಿವರಗಳನ್ನು ತಿಳಿಸುವುದು ?

ಅ) ಓಲೆ (ಅರವತ್ತೇಳು).

ಆ) ಇದುವರೆವಿಗೆ ಯಾವುದೇ ಕಾರ್ಖಾನೆಯಿಂದ ದೂರು ಬಂದಿರುವುದಿಲ್ಲ.

ಇ) ಹೆಚ್ಚು ಕಾರ್ಮಿಕರಿಗೆ ಕನಿಷ್ಠ ವೇತನವನ್ನು ೧೯೬೭ರಲ್ಲಿ ಪರಿಷ್ಕರಿಸಲಾಯಿತು. ಆದರೆ, ಈ ಅಧಿಸೂಚನೆಯು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲ್ಪಟ್ಟಿತ್ತು. ೧೨-೫-೬೮ರಂದು, ನ್ಯಾಯಾಲಯವು ತಡೆಯಾಜ್ಞೆ ನೀಡಿತು. ಆದಕಾರಣ ಈ ಅಧಿಸೂಚನೆಯನ್ನು ಜಾರಿಗೊಳಿಸಲಾಗಲಿಲ್ಲ. ದರಗಳ ವಿವರವನ್ನು ಅನುಬಂಧಿಸಿರುವ ಅಧಿಸೂಚನೆಯ ಪ್ರತಿಯಲ್ಲಿ ನೋಡಬಹುದು.

ಕರ್ನಾಟಕ ಕರಾವಳಿಯಲ್ಲಿ ಚಿಕ್ಕ ಬಂದರುಗಳ ಅಭಿವೃದ್ಧಿ ಬಗ್ಗೆ

೩೦೫೪. ಜಿ. ಎಸ್. ಆಚಾರ್ (ಬೈಂದೂರು).—ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಕರಾವಳಿಯಲ್ಲಿ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿಗೆ ಚಿಕ್ಕ ಬಂದರುಗಳನ್ನು ಸ್ಥಾಪಿಸಿ, ಅಭಿವೃದ್ಧಿ ಪಡಿಸಬೇಕೆಂಬ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಅಂತಹ ಬಂದರುಗಳು ಯಾವುವು ?

ಇ) ಅವುಗಳ ಅಭಿವೃದ್ಧಿ ಸಲುವಾಗಿ ಯಾವ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳಲಿದ್ದಾರೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು.).—

ಅ) ಇದೆ.

ಆ) ೧) ದಕ್ಷಿಣ ಕನ್ನಡ ಜಿಲ್ಲೆಯ, ಹಂಗಾರಕಟ್ಟೆ, ತಶಿಹಿತ್ಲು, ಗಂಗೊಳ್ಳಿ, ಕೋಡಿ-ಕುಂದಾಪುರ ಮತ್ತು ಶಿರೂರು-ಆಳ್ವೆಗಡ್ಡೆ.

೨) ಉತ್ತರ ಕನ್ನಡ ಜಿಲ್ಲೆಯ ಮಾಜಾಳಿ, ಭಟ್ಕಳ ಮತ್ತು ತೆಂಗಿನಗುಂಡಿ.

ಇ) ಇವುಗಳಲ್ಲಿ ಕೆಲವು ಬಂದರುಗಳನ್ನು ಏನೇ ಪಂಚ ವಾರ್ಷಿಕ ಯೋಜನೆಯಲ್ಲಿ ಅಭಿವೃದ್ಧಿಗೊಳಿಸಲಾಗುವುದು.

ಜನಸಂಖ್ಯೆಗನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ.

೩೦೦೧ ಶ್ರೀ ಪಿ. ಸಿ ಮುನಿಸ್ವಾಮಪ್ಪ, (ದೇವನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಷ್ಟ್ರೀಯ ಆರೋಗ್ಯ ನೀತಿಯ ಪ್ರಕಾರ ಎಷ್ಟು ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕು ಎಂಬ ನಿಯಮವಿದೆ ?

ಆ) ಈ ದಾವಣಗೆರೆ (ದೇವಿಯೋ) ಪ್ರಕಾರ ನಮ್ಮ ರಾಜ್ಯದಲ್ಲಿ ಇನ್ನೂ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪನೆಯಾಗಬೇಕಾಗಿದೆ ?

ಇ) ಹೊಸದಾಗಿ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಸ್ಥಳಗಳನ್ನೇ ನಾದರೂ ಗುರುತಿಸಲಾಗಿದೆಯೇ ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಯ ಯಾವ ಯಾವ ಊರುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಉದ್ದೇಶಿಸಲಾಗಿದೆ ?

ಈ) ಈ ರೀತಿ ಉದ್ದೇಶಿಸಿದ್ದಲ್ಲಿ, ಇನ್ನೂ ಮೇಲಾದರೂ ಎಲ್ಲೆಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಬಗ್ಗೆ ಸಮೀಕ್ಷೆ ನಡೆಸಿ ಆ ಊರುಗಳ ಪಟ್ಟಿಯನ್ನು ಇಟ್ಟುಕೊಂಡು ಅದರಂತೆ, ಆದ್ಯತೆ ಮೇರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು) —

ಅ) ರಾಷ್ಟ್ರೀಯ ಆರೋಗ್ಯ ನೀತಿಯ ಪ್ರಕಾರ ಬಯಲು ಸೀಮೆಯಲ್ಲಿ ಪ್ರತಿ ೫೦,೦೦೦ ಜನ ಸಂಖ್ಯೆಗೊಂದರಂತೆ ಹಾಗೂ ಆದಿವಾಸಿ ಮತ್ತು ಗುಡ್ಡಗಾಡು ಪ್ರದೇಶದಲ್ಲಿ ಪ್ರತಿ ೨೦,೦೦೦ ಜನಸಂಖ್ಯೆಗೊಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವ ನಿಯಮವಿದೆ.

ಆ) ೧೯೮೧ನೇ ಜನಗಣತಿ ಪ್ರಕಾರ ೭ನೇ ಪಂಚವಾರ್ಷಿಕ ಯೋಜನೆ ಅಂತ್ಯದ ವೇಳೆಗೆ ಅಂದರೆ ೧೯೮೯-೯೦ನೇ ಸಾಲಿನೊಳಗೆ ರಾಜ್ಯದ ಗ್ರಾಮೀಣ ಜನಸಂಖ್ಯೆ ೩೦೨.೯೯ ಲಕ್ಷದಷ್ಟಾಗ-ಬಹುದೆಂದು ಅಂದಾಜು ಮಾಡಲಾಗಿದ್ದು, ಈ ಪ್ರಕಾರ ಆ ವೇಳೆಗೆ ರಾಜ್ಯದಲ್ಲಿ ಒಟ್ಟು ೧,೧೫೯ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯವಿದ್ದು, ಪ್ರಸ್ತುತ ೫೪೫ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಾ ಇವೆ. ಇನ್ನೂ ೫೯೪ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕಾಗುವುದು, ಇದರಲ್ಲಿ ೧೯೮೮-೮೯ನೇ ಸಾಲಿನಲ್ಲಿ ೩೦೦ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಹಾಕಿಕೊಳ್ಳಲಾಗಿದೆ.

ಇ) ಹೊಸದಾಗಿ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ೧೯೮೮-೮೯ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳು ಸ್ಥಳಗಳನ್ನು ಗುರುತಿಸಿದ್ದು, ಈ ಸ್ಥಳಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಈ) ಜಿಲ್ಲಾ ಪರಿಷತ್ತುಗಳು ಆಯಾ ಜಿಲ್ಲೆಗಳಲ್ಲಿನ ಜನಸಂಖ್ಯೆ ಮತ್ತು ಆಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಯಾವ ಯಾವ ಊರುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿ ಪ್ರಸ್ತಾವನೆಯನ್ನು ಶಿಫಾರಸ್ಸಿನೊಂದಿಗೆ ಕಳುಹಿಸಿದಲ್ಲಿ ಆಯಾ ಊರುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಂ ಕ್ರಮಸಿಕ್ಕೆಗೊಳ್ಳಲಾಗುವುದು.

ಸಹ್ಯಾದ್ರಿ ಸ್ಪಿನ್ನಿಂಗ್ ಮಿಲ್ ಕುರಿತಂ

ಕೆಂಗೇರಿ ಶ್ರೀ ಸ್ವಾಮಿರಾವ್, (ಹೊಸನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಹ್ಯಾದ್ರಿ ಸ್ಪಿನ್ನಿಂಗ್ ಮಿಲ್ ಯಾವಾಗ ಸ್ಥಾಪನೆಯಾಯಿತು ?

ಆ) ಇದರ ಷೇರು ಬಂಡವಾಳ ಎಷ್ಟು ಯಾವ ಮೂಲದಿಂದ ಸಂಗ್ರಹಿಸಲಾಯಿತು ?

೧) 'ಎ' ತರಗತಿಯ ಸದಸ್ಯರು (ಬಿಡಿ ವ್ಯಕ್ತಿಗಳು)

೨) 'ಬಿ' ತರಗತಿಯ ಸದಸ್ಯರು ಸಹಕಾರ ಸಂಸ್ಥೆಗಳಂ

ಇ) ಇದರ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ ? (ಅವರ ಹೆಸರು ಹಾಗೂ ವಿಳಾಸದ ವಿವರ ನೀಡುವುದು)

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು),—

ಅ) ದಿನಾಂಕ ೧೧-೬-೧೯೮೪ರಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ.